# ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

**OFFICE OF THE DEPUTY TAHASILDAR, THAMBRAHALLI-583224**

ಎ.ವಿಲೇ.ನಂ.ಕಂ.ಪಹಣಿ.ವಿವಾದ/29/2015-16 ದಿನಾಂಕ: 26 .05.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

| ವಾದಿ (ಶ್ರೀ/ಶ್ರೀಮತಿ) | ಪ್ರತಿವಾದಿ (ಶ್ರೀ/ಶ್ರೀಮತಿ) |
|---|---|
| 1) ಕಿತ್ನೂರು ವೀರಭದ್ರಪ್ಪ 2) ಕಿತ್ನೂರು ಮಂಜುನಾಥ ಮತ್ತು 3) ಕಿತ್ನೂರು ನವೀನ ಕುಮಾರ ಎಲ್ಲರ ತಂದೆ ಕೆ ರುದ್ರಪ್ಪ ವಾಸ ಹಗರಿಕ್ಯಾದಗಿಹಳ್ಳಿ ಗ್ರಾಮ ಹ.ಬೊ.ಹಳ್ಳಿ ತಾಲೂಕು | ಕಂದಾಯ ನಿರೀಕ್ಷಕರು ತಂಬ್ರಹಳ್ಳಿ |

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ಬಾಚಿಗೊಂಡನಹಳ್ಳಿ | 596/ಬಿ2 | 3.16 ಎಕರೆ |

*****

**ಪೀಠಿಕೆ:**

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಹಗರಿಕ್ಯಾದಿಗಿಹಳ್ಳಿ ಗ್ರಾಮದ ಸ.ನಂ.596/ಬಿ2 ವಿಸ್ತೀರ್ಣ 3.16 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಪಾಲು ವಿಭಾಗ ದಸಾವೇಜು ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:22/2015-16 ರಲ್ಲಿ ಪ್ರಸ್ತುತ ಹಕ್ಕುಬದಲಾವಣೆಗೆ ಸಂಬಂಧಿಸಿದಂತೆ ಮರಣ ಪ್ರಮಾಣ ಪತ್ರ ಹಾಜರುಪಡಿಸದ ಕಾರಣ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:17.12.2015ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪ್ರಕಾರ ವ್ಯಾಜ್ಯದ ಜಮೀನು ಮೂಲತಃ ವಾದಿಗಳ ತಂದೆಯವರಾದ ಕಿತ್ನೂರು ರುದ್ರಪ್ಪ ತಂದೆ ವೀರಪ್ಪ ಇವರ ಜಮೀನಾಗಿದ್ದು ಸದರಿ ಜಮೀನು ಪಿತ್ರಾರ್ಜಿತ ಆಸ್ತಿಯಾಗಿದ್ದು ಹಿರಿಯರ ತೀರ್ಮಾನದಂತೆ ದಿನಾಂಕ:20.04.2015 ರಂದು ಪಾಲು ವಿಭಾಗ ಮಾಡಿಕೊಂಡಿದ್ದು ಸದರಿ ಪಾಲು ವಿಭಾಗ ದಸ್ತಾವೇಜು ಮೇರೆಗೆ ವಾದಿಗಳ ಹೆಸರಿಗೆ ಜಂಟಿಯಾಗಿ ಖಾತೆ ಮಾಡಲು ಕೋರಿರುತ್ತಾರೆ.

ಪ್ರಸ್ತುತ ಹಕ್ಕುಬದಲಾವಣೆಗೆ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಹಕ್ಕು ಬದಲಾವಣೆಗೆ ವ್ಯಾಜ್ಯದ ಜಮೀನಿನ ಮೂಲ ಪಟ್ಟಾದಾರರಾದ ಕಿತ್ನೂರು ರುದ್ರಪ್ಪ ತಂದೆ ವೀರಪ್ಪ ಇವರಿಗೆ ಇಬ್ಬರು ಹೆಂಡತಿಯರಿದ್ದು 1ನೇ ಹೆಂಡತಿಯಾದ ಶ್ರೀಮತಿ ಕೆ ಮಹಾದೇವಮ್ಮ ಇವರು ಮರಣ ಹೊಂದಿದ್ದು ಸದರಿಯವರ ಮರಣ ಪ್ರಮಾಣಪತ್ರವನ್ನು ಹಾಜರುಪಡಿಸದೇ ಇರುವುದರಿಂದ ಪ್ರಕರಣವು ವಿವಾದಾಸ್ಪದವೆಂದು ಪರಗಣಿಸಿ ಈ ಕಛೇರಿಗೆ ಸಲ್ಲಿಸಿರುತ್ತಾರೆ.

ವಿಚಾರಣಾ ವೇಳೆ ವಾದಿಗಳು ವ್ಯಾಜ್ಯದ ಜಮೀನಿನ ಮೂಲ ಪಟ್ಟಾದಾರರಾದ ಕಿತ್ನೂರು ರುದ್ರಪ್ಪ ತಂದೆ ವೀರಪ್ಪ ಇವರ 1ನೇ ಪತ್ನಿಯಾದ ಶ್ರೀಮತಿ ಕೆ ಮಹಾದೇವಮ್ಮ ಇವರ ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಿರುತ್ತಾರೆ.

ವಾದಿಗಳು ಮಂಡಿಸಿದ ವಾದ-ಪ್ರತಿವಾದ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

1. ವ್ಯಾಜ್ಯದ ಜಮೀನಿನ ಪಹಣಿ ಪತ್ರಿಕೆಯನ್ನು ಪರಿಶೀಲಿಸಲಾಗಿ ಬಾಚಿಗೊಂಡನಹಳ್ಳಿ ಗ್ರಾಮದ ಸ.ನಂ. 596/ಬಿ/2 ವಿಸ್ತೀರ್ಣ 3.16 ಎಕರೆ ಜಮೀನು ವಾದಿಗಳ ತಂದೆಯಾದ ಕಿತ್ತೂರು ರುದ್ರಪ್ಪ ತಂದೆ ವೀರಪ್ಪ ಇವರ ಹೆಸರಿನಲ್ಲಿರುವುದು ಕಂಡುಬಂದಿರುತ್ತದೆ.
2. ವಾದಿಗಳು ಸಲ್ಲಿಸಿದ ಪಾಲು ವಿಭಾಗ ದಸ್ತಾವೇಜು ದಿನಾಂಕ:20.04.2015 ರ ಪ್ರಕಾರ ಪ್ರಸ್ತುತ ವ್ಯಾಜ್ಯದ ಜಮೀನನ್ನು ಸದರಿ ಪಟ್ಟಾದಾರರ ಮಕ್ಕಳಾದ ವಾದಿಗಳ ಹೆಸರಿಗೆ ಜಂಟಿಯಾಗಿ ಖಾತೆ ಮಾಡಿಕೊಡುವಂತೆ ಹಾಗೂ ಕುಟುಂಬಸ್ಥರು ಪ್ರಸ್ತುತ ಖಾತೆ ಬದಲಾವಣೆಗೆ ಯಾವುದೇ ಆಕ್ಷೇಪಣೆ ಇಲ್ಲವೆಂದು ವಾದಿಗಳ ಹೆಸರಿಗೆ ಜಂಟಿಯಾಗಿ ಖಾತೆ ಮಾಡಲು ಮನವಿ ಸಲ್ಲಿಸಿರುತ್ತಾರೆ.
3. ಪ್ರತಿವಾದಿಗಳು ಸಲ್ಲಿಸಿದ ವಂಶವೃಕ್ಷದ ಪ್ರತಿಯನ್ನು ಪರಿಶೀಲಿಸಲಾಗಿ ವ್ಯಾಜ್ಯದ ಜಮೀನಿನ ಪಟ್ಟಾದಾರರಾದ ಕಿತ್ತೂರು ರುದ್ರಪ್ಪ ತಂದೆ ವೀರಪ್ಪ ಇವರಿಗೆ 1. ಕೆ ಮಹಾದೇವಮ್ಮ (ಪೋತಿ) 2. ಕೆ.ನಿಂಗಮ್ಮ ಎಂಬ ಇಬ್ಬರು ಹೆಂಡತಿಯರಿದ್ದು ಈ ಪೈಕಿ ಮೊದಲನೇ ಹೆಂಡತಿಯಾದ ಶ್ರೀಮತಿ ಮಹಾದೇವಕ್ಕ ಇವರು ದಿನಾಂಕ:18.08.1977 ರಲ್ಲಿ ಮರಣಹೊಂದಿರುವುದಾಗಿ ಮರಣ ಪ್ರಮಾಣ ಪತ್ರದಿಂದ ಕಂಡುಬಂದಿರುತ್ತದೆ ಸದರಿಯವರಿಗೆ 1. ವೀರಮ್ಮ 2. ದ್ರಾಕ್ಷಾಯಣಮ್ಮ 3. ಕಾಳಮ್ಮ 4. ವೀರಭದ್ರಪ್ಪ ಎಂಬ ನಾಲ್ಕುಜನ ಮಕ್ಕಳಿದ್ದು 2ನೇ ಹೆಂಡತಿಯಾದ ಶ್ರೀಮತಿ ನಿಂಗಮ್ಮ ಇವರಿಗೆ 1. ಮಂಜುನಾಥ 2. ನವೀನಕುಮಾರ ಎಂಬ ಇಬ್ಬರು ಮಕ್ಕಳಿರುರುವುದು ಕಂಡುಬಂದಿರುತ್ತದೆ.
4. ಪ್ರಸ್ತುತ ವ್ಯಾಜ್ಯದ ಜಮೀನನ್ನು ಮೂಲ ಪಟ್ಟಾದಾರರ ಮೊದಲನೇ ಹೆಂಡತಿಯ ಮಗನಾದ ವೀರಭದ್ರಪ್ಪ ಹಾಗೂ 2ನೇ ಹೆಂಡತಿಯ ಮಕ್ಕಳಾದ 1. ಮಂಜುನಾಥ 2. ನವೀನ ಕುಮಾರ ಇವರ ಹೆಸರಿಗೆ ಜಂಟಿಯಾಗಿ ಖಾತೆ ಮಾಡಲು ಯಾವುದೇ ಆಕ್ಷೇಪಣೆಗಳಿಲ್ಲವೆಂದು ಕಂದಾಯ ನಿರೀಕ್ಷಕರ ವರದಿ ಮೇರೆಗೆ ಕಂಡುಬಂದಿರುತ್ತದೆ,

ಮೇಲ್ಕಂಡ ಅಂಶಗಳನ್ನು ಪರಿಗಣನಗೆ ತೆಗೆದುಕೊಂಡು ವ್ಯಾಜ್ಯದ ಜಮೀನಿನ ಪಟ್ಟಾದಾರರ ಕುಟುಂಬಸ್ಥರು ಹಿರಿಯರ ಸಮ್ಮುಖದಲ್ಲಿ ದಿನಾಂಕ:20.04.2015 ಪಾಲು ವಿಭಾಗ ದಸ್ತಾವೇಜು ಮೇರೆಗೆ ವಾದಿಗಳ ಹೆಸರಿಗೆ ಜಂಟಿಯಾಗಿ ಖಾತೆ ಮಾಡುವುದು ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡಂತೆ ಆದೇಶ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಹಗರಿಕ್ಯಾದಿಗಿಹಳ್ಳಿ ಗ್ರಾಮದ ಸ.ನಂ. 596/ಬಿ2 ವಿಸ್ತೀರ್ಣ 3.16 ಎಕರೆ__ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ವ್ಯಾಜ್ಯದ ಜಮೀನಿನ ಪಟ್ಟಾದಾರರ ಕುಟುಂಬಸ್ಥರು ಮಾಡಿಕೊಂಡ ಪಾಲು ವಿಭಾಗ ದಸ್ತಾವೇಜು ದಿನಾಂಕ:20.04.2015 ರ ಮೇರೆಗೆ ವಾದಿಗಳಾದ 1. ಕಿತ್ತೂರು ವೀರಭದ್ರ ಪ್ಪ ತಂದೆ ಕೆ ರುದ್ರಪ್ಪ 2. ಕಿತ್ತೂರು ಮಂಜುನಾಥ ತಂದೆ ಕೆ.ರುದ್ರಪ್ಪ 3. ಕಿತ್ತೂರು ನವೀನ ಕುಮಾರ ತಂದೆ ಕೆ. ರುದ್ರಪ್ಪ ಇವರ ಹೆಸರಿಗೆ ಜಂಟಿಯಾಗಿ ಖಾತೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: ೨೬.05.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

26/05

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ತಂಬ್ರಹಳ್ಳಿ.

ಉಪ ತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ.

ಉಪ ತಹಶೀಲ್ದಾರರ ಕಛೇರಿ ★ Office of the Tahasildar ★ ತಂಬ್ರಹಳ್ಳಿ

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

20/7/16